# ಮೈಕ್ರೊ ಯೂನಿಟ್ಸ್ ಡೆವೆಲಪ್‌ಮೆಂಟ್ ಅಂಡ್ ರೀಫೈನಾನ್ಸ್ ಏಜೆನ್ಸಿ ಲಿಮಿಟೆಡ್(ಮುದ್ರಾ- MUDRA)
# ಅಸಂಘಟಿತರನ್ನು ಸಂಘಟಿತರಾಗಿಸುವುದು

## ಮುದ್ರಾ ಧ್ಯೇಯೋದ್ದೇಶ

- 2013ರ ಎನ್‌ಎಸ್‌ಎಸ್‌ಒ ಸಮೀಕ್ಷೆಯ ಪ್ರಕಾರ 5.77 ಕೋಟಿ(57.70ಮಿಲಿಯನ್) ಸಣ್ಣ ಉದ್ಯಮ ಘಟಕಗಳಿದ್ದು ಬಹುತೇಕ ಪ್ರೊಪ್ರೈಟರ್‌ಶಿಪ್ ಆಗಿದ್ದು ಸಣ್ಣ ಉತ್ಪಾದನೆ, ವ್ಯಾಪಾರ ಅಥವಾ ಸೇವಾ ಚಟುವಟಿಕೆಗಳನ್ನು ಹೊಂದಿವೆ. ಇವುಗಳಲ್ಲಿ ಬಹಳಷ್ಟು 'ಸ್ವಂತ ಖಾತೆಯ ಉದ್ಯಮಗಳು' ಆಗಿದ್ದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳಿಗೆ ಸೇರಿವೆ. ಅಂತಹ ಬಹಳಷ್ಟು ಘಟಕಗಳಿಗೆ ಸಾಂಸ್ಥಿಕ ಹಣಕಾಸು ದೊರೆಯುವುದಿಲ್ಲ. ಅಂತಹ ಕಿರು/ಸಣ್ಣ ಉದ್ಯಮ ಘಟಕಗಳಿಗೆ ಸಾಂಸ್ಥಿಕ ಹಣಕಾಸು ದೊರೆಯುವಂತೆ ಮಾಡುವ ಮೂಲಕ ಅವುಗಳನ್ನು ಜಿಡಿಪಿ ಪ್ರಗತಿಯ ಸದೃಢ ಸಾಧನಗಳನ್ನಾಗಿಸುವುದು ಮತ್ತು ಉದ್ಯೋಗಸೃಷ್ಟಿ ಮಾಡುವುದು.
- ಈ ಉದ್ಯಮಗಳನ್ನು ಮುಖ್ಯವಾಹಿನಿಗೆ ತರುವುದು ಈ ಉದ್ಯಮಿಗಳ ಜೀವನಮಟ್ಟ ಸುಧಾರಿಸುವುದಲ್ಲದೆ ಅರ್ಥವ್ಯವಸ್ಥೆಯಲ್ಲಿ ಉದ್ಯೋಗಸೃಷ್ಟಿಗೆ ಗಮನಾರ್ಹವಾಗಿ ಕೊಡುಗೆ ನೀಡುವ ಮೂಲಕ ಆದಾಯ ವಿತರಣೆ ಮತ್ತು ಬಡತನ ಕಡಿಮೆ ಮಾಡುತ್ತದೆ.
- ಮೈಕ್ರೊ ಯೂನಿಟ್ಸ್ ಡೆವಲಪ್‌ಮೆಂಟ್ ಅಂಡ್ ರೀಫೈನಾನ್ಸ್ ಏಜೆನ್ಸಿ(ಮುದ್ರಾ) ಪ್ರಸ್ತುತ ಎನ್‌ಬಿಎಫ್‌ಐ ಆಗಿ ಸ್ಥಾಪನೆಯಾಗಿದ್ದು ಶಾಸನದ ಮೂಲಕ ಬ್ಯಾಂಕ್ ಆಗಿ ಪರಿವರ್ತಿಸಲಾಗುತ್ತದೆ. ಇದು ಬ್ಯಾಂಕ್‌ಗಳಿಗೆ ರೀಫೈನಾನ್ಸ್ ಮಾಡುವುದು, ಎನ್‌ಬಿಎಫ್‌ಸಿ/ಎಂಎಫ್‌ಐಗಳಿಗೆ ಆರ್ಥಿಕ ನೆರವು ವಿಸ್ತರಿಸುವುದು ಮತ್ತು ಮೈಕ್ರೊ-ಫೈನಾನ್ಸ್ ಇನ್‌ಸ್ಟಿಟ್ಯೂಷನ್(ಎಂಎಫ್‌ಐ)ಗಳ ನಿಯಂತ್ರಣ ಮತ್ತು ಅಭಿವೃದ್ಧಿಯನ್ನು ಉತ್ಪಾದನೆ, ವ್ಯಾಪಾರ ಮತ್ತು ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ಕಿರು/ಸಣ್ಣ ಉದ್ಯಮಗಳಿಗೆ ಸಾಂಸ್ಥಿಕ ಹಣಕಾಸು ದೊರೆಯುವಂತೆ ವಿಸ್ತರಿಸುತ್ತದೆ. ಬ್ಯಾಂಕ್ ರಾಜ್ಯ/ಪ್ರಾದೇಶಿಕ ಮಟ್ಟ ಕೋ-ಆರ್ಡಿನೇಟರ್‌ಗಳೊಂದಿಗೆ ಸಹಯೋಗ ಹೊಂದಿದ್ದು ಸಣ್ಣ/ಕಿರು ಉದ್ಯಮಗಳಿಗೆ ಕೊನೆಯ ಹಂತದ ಫೈನಾನ್ಸಿಯರ್ ಆಗಿ ಕೆಲಸ ಮಾಡುತ್ತದೆ.
- ಮುದ್ರಾ, ಏಪ್ರಿಲ್ 08, 2015ರಂದು ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಸಿಡ್ಬಿಯ ಅಧೀನ ಸಂಸ್ಥೆಯಾಗಿ ಪ್ರಾರಂಭಿಸಿದರು ಮತ್ತು ಏಪ್ರಿಲ್ 13, 2015ರಿಂದ ಕಾರ್ಯಾರಂಭ ಮಾಡಿದೆ.

## ಮೈಕ್ರೋಫೈನಾನ್ಸ್ ಮತ್ತು ಮುದ್ರಾ

- ಮುದ್ರಾ ಗಮನಾರ್ಹ ಪಾತ್ರ ವಹಿಸಬಲ್ಲ ಕೆಲ ಕ್ಷೇತ್ರಗಳು:
  1) ಕಿರು ಉದ್ಯಮಗಳ ಹಣಕಾಸು ವಹಿವಾಟಿಗೆ ನೀತಿಯ ಮಾರ್ಗದರ್ಶಿ ಸೂತ್ರಗಳ ರಚನೆ
  2) ಎಂಎಫ್‌ಐ ಘಟಕಗಳ ನೋಂದಣಿ
  3) ಎಂಎಫ್‌ಐ ಘಟಕಗಳ ಮೇಲ್ವಿಚಾರಣೆ

4) ಎಂಎಫ್ಐ ಘಟಕಗಳ ಮಾನ್ಯತೆ/ರೇಟಿಂಗ್
5) ಸಾಲದ ಸುಳಿಗೆ ಸಿಲುಕುವುದರ ನಿವಾರಣೆಗೆ ಜವಾಬ್ದಾರಿಯುತ ಹಣಕಾಸು ರೂಢಿಗಳನ್ನು ರೂಪಿಸುವುದು ಮತ್ತು ಸೂಕ್ತ ಗ್ರಾಹಕ ಸಂರಕ್ಷಣೆಯ ತತ್ವಗಳು ಮತ್ತು ಮರು ಪಡೆಯುವಿಕೆ ವಿಧಾನಗಳನ್ನು ರೂಪಿಸುವುದು
6) ಕಿರು/ಸಣ್ಣ ಉದ್ಯಮಗಳಿಗೆ ಹಣಕಾಸು ನೆರವು ನೀಡಲು ಪ್ರಮಾಣೀಕೃತ ನಿಯಮಗಳನ್ನು ಅಭಿವೃದ್ಧಿಪಡಿಸುವುದು
7) ಕೊನೆಯ ಹಂತದ ಹಣಕಾಸು ಪೂರೈಕೆಗೆ ಸೂಕ್ತ ತಂತ್ರಜ್ಞಾನ ಪರಿಹಾರಗಳನ್ನು ಉತ್ತೇಜಿಸುವುದು
8) ಬ್ಯಾಂಕ್‌ಗಳು, ಎನ್‌ಬಿಎಫ್‌ಸಿಗಳು ಮತ್ತು ಎಂಎಫ್ಐಗಳು ಕಿರು ಉದ್ಯಮಗಳಿಗೆ ನೀಡುವ ಸಾಲಗಳು/ ಬಂಡವಾಳಗಳಿಗೆ ಭದ್ರತೆಯಾಗಿ ಕ್ರೆಡಿಟ್ ಗ್ಯಾರೆಂಟೀ ಸ್ಕೀಂ ರೂಪಿಸಿ ನಿರ್ವಹಿಸುವುದು
9) ಈ ವಲಯದಲ್ಲಿ ಅಭಿವೃದ್ಧಿ ಮತ್ತು ಉತ್ತೇಜನಕಾರಿ ಚಟುವಟಿಕೆಗಳಿಗೆ ಬೆಂಬಲಿಸುವುದು
10) ಕಿರು ಉದ್ಯಮಗಳಿಗೆ ಕೊನೆಯ ಹಂತದ ಸಾಲ ಪೂರೈಕೆಗೆ ಉತ್ತಮ ವ್ಯವಸ್ಥೆಯನ್ನು ಈ ಸ್ಕೀಂ ಅಡಿ ಸೃಷ್ಟಿಸುವುದು

**ಮುದ್ರಾ ಕನಸು**

*‘ಅತ್ಯಂತ ಕೆಳಹಂತದಲ್ಲಿ ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಜಾಗತಿಕ ಅತ್ಯುತ್ತಮ ರೂಢಿಗಳು ಮತ್ತು ಮಾನದಂಡಗಳ ಅನ್ವಯ ಸಮಗ್ರ ಹಣಕಾಸು ಮತ್ತು ಸೇವಾ ಪೂರೈಕೆದಾರನಾಗಬೇಕು’*

**ಮುದ್ರಾ ಧ್ಯೇಯ**

*‘ನಮ್ಮ ಪಾಲುದಾರ ಸಂಸ್ಥೆಗಳ ಸಹಯೋಗದಲ್ಲಿ ಆರ್ಥಿಕ ಯಶಸ್ಸು ಮತ್ತು ಹಣಕಾಸು ಭದ್ರತೆ ಸಾಧಿಸಲು ಎಲ್ಲರನ್ನೂ ಒಳಗೊಂಡ, ಸುಸ್ಥಿರ ಮತ್ತು ಮೌಲ್ಯ ಆಧರಿತ ಉದ್ಯಮ ಸಂಸ್ಕೃತಿಯ ಸೃಷ್ಟಿ’*

**ಮುದ್ರಾ ಉದ್ದೇಶ**

*ನಮ್ಮ ಮೂಲ ಉದ್ದೇಶ ಎಲ್ಲರನ್ನೂ ಒಳಗೊಂಡ ಸುಸ್ಥಿರ ವಿಧಾನದ ಅಭಿವೃದ್ಧಿಯನ್ನು ಪಾಲುದಾರ ಸಂಸ್ಥೆಗಳಿಗೆ ಬೆಂಬಲ ಮತ್ತು ನೆರವಿನೊಂದಿಗೆ ಕಿರು ಉದ್ಯಮ ವಲಯದ ಪ್ರಗತಿಗೆ ಪೂರಕ ವ್ಯವಸ್ಥೆ ಸೃಷ್ಟಿಸುವ ಮೂಲಕ ಸಾಧಿಸುವುದು*

## ಉತ್ಪನ್ನಗಳು /ಆಫರಿಂಗ್‌ಗಳು

- ಕಿರು ಸಾಲಕ್ಕೆ ವಿಶೇಷ ಆದ್ಯತೆ ನೀಡಿ 10 ಲಕ್ಷ ರೂ.ಗಳ(1 ಮಿಲಿಯನ್) ಹಣಕಾಸಿನ ಅಗತ್ಯವುಳ್ಳ ಕಿರು ಘಟಕಗಳ ರೀಫೈನಾನ್ಸ್ ಉತ್ಪನ್ನ. ಮುದ್ರಾ ಕಿರು ಉದ್ಯಮಗಳಿಗೆ ರೀಫೈನಾನ್ಸ್ ಅನ್ನು ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ನೀಡುತ್ತದೆ. ಇತರೆ ಉತ್ಪನ್ನಗಳು ಈ ವಲಯದ ಅಭಿವೃದ್ಧಿಗೆ ಬೆಂಬಲ ನೀಡಲು ಇವೆ. ಮುದ್ರಾದ ಆಫರಿಂಗ್‌ಗಳ ಗುಚ್ಛವನ್ನು ಕೆಳಗೆ ನೀಡಲಾಗಿದೆ. ಆಫರಿಂಗ್‌ಗಳು ಫಲಾನುಭವಿಗಳನ್ನು ಗುರಿಯಾಗಿಸಿಕೊಂಡು ವಲಯಕ್ಕೆ ವಿಸ್ತರಿಸಲಾಗಿದೆ.




- ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿಯಲ್ಲಿ ಮುದ್ರಾ ಈಗಾಗಲೇ ತನ್ನ ಪ್ರಾರಂಭಿಕ ಉತ್ಪನ್ನಗಳು/ಯೋಜನೆಗಳನ್ನು ಸೃಷ್ಟಿಸಿದೆ. ಇವುಗಳನ್ನು 'ಶಿಶು', 'ಕಿಶೋರ್' ಮತ್ತು 'ತರುಣ್' ಎಂದು ಫಲಾನುಭವಿ ಕಿರು ಘಟಕ/ಉದ್ಯಮದ ಬೆಳವಣಿಗೆ/ಅಭಿವೃದ್ಧಿಯ ಅಗತ್ಯಕ್ಕೆ ತಕ್ಕಂತೆ ಹೆಸರಿಸಲಾಗಿದೆ ಮತ್ತು ಮುಂದಿನ ಹಂತದ ವಿಸ್ತರಣೆ/ಪ್ರಗತಿಗೆ ಸೂಚಕವಾಗಿಯೂ ಕಾಣುತ್ತದೆ:
    - **ಶಿಶು: 50,000ರೂ.ವರೆಗಿನ ಸಾಲಗಳ ವ್ಯಾಪ್ತಿ**
    - **ಕಿಶೋರ್: 50,000ರೂ. ಮತ್ತು 5 ಲಕ್ಷ ರೂ.ವರೆಗೆ**
    - **ತರುಣ್: 5 ಲಕ್ಷ ರೂ. ಮೇಲ್ಪಟ್ಟು 10 ಲಕ್ಷ ರೂ.ವರೆಗಿನ ಸಾಲಗಳ ವ್ಯಾಪ್ತಿ**

ಮುದ್ರಾ ಕನಿಷ್ಠ ಶೇ.೬೦ರಷ್ಟು ಸಾಲ ಶಿಶು ವಿಭಾಗದ ಘಟಕಗಳಿಗೆ ದೊರೆಯಬೇಕು ಎನ್ನುವುದು ಮುದ್ರಾದ ಪ್ರಯತ್ನವಾಗಿದೆ ಮತ್ತು ಉಳಿದ ಹಣ ಕಿಶೋರ್ ಮತ್ತು ತರುಣ್ ವಿಭಾಗಗಳಿಗೆ ಸಲ್ಲಬೇಕು.

- ಚೌಕಟ್ಟಿನ ಒಳಗೆ ಮತ್ತು ಶಿಶು, ಕಿಶೋರ್ ಮತ್ತು ತರುಣ್ ಘಟಕಗಳ ಒಟ್ಟಾರೆ ಅಭಿವೃದ್ಧಿ ಮತ್ತು ಪ್ರಗತಿಯ ಉದ್ದೇಶದಿಂದ ಮುದ್ರಾದ ಉತ್ಪನ್ನಗಳು ಪ್ರಾರಂಭಿಕ ಹಂತದಲ್ಲಿಯೇ ವಿವಿಧ ವಲಯಗಳು/ವ್ಯಾಪಾರ ಚಟುವಟಿಕೆಗಳು ಅಲ್ಲದೆ ಉದ್ಯಮ/ಉದ್ಯಮಿಗಳ ವಲಯಕ್ಕೆ ದೊರೆಯಬೇಕೆನ್ನುವ ಉದ್ದೇಶ ಹೊಂದಿದೆ. ಸಂಕ್ಷಿಪ್ತ ವಿವರಗಳು ಹೀಗಿವೆ:
    - ✓ *ವಲಯ/ಚಟುವಟಿಕೆ ಆಧಾರಿತ ಯೋಜನೆಗಳು*
    - ✓ *ಕಿರು ಸಾಲ ಯೋಜನೆಗಳು(ಎಂಸಿಎಸ್)*
    - ✓ *ವಾಣಿಜ್ಯ ಬ್ಯಾಂಕ್‌ಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು(ಆರ್‌ಆರ್‌ಬಿಗಳು)/ಶೆಡ್ಯೂಲ್ಡ್ ಕೋ-ಆಪರೇಟಿವ್ ಬ್ಯಾಂಕ್‌ಗಳು*
    - ✓ *ಮಹಿಳಾ ಉದ್ಯಮಿ ಯೋಜನೆ*
    - ✓ *ಕಿರು ಉದ್ಯಮ ಸಾಲಗಳು*

- ಯೋಜನೆಗಳ ಪ್ರಮುಖಾಂಶಗಳು ಮತ್ತು ವಿನೂತನ ಉತ್ಪನ್ನಗಳನ್ನು ಇನ್ನೂ ರೂಪಿಸಲಾಗುತ್ತಿದ್ದು ಮುದ್ರಾ ನೀಡಲಿರುವ ಆಫರಿಂಗ್‌ಗಳು ಈ ಕೆಳಕಂಡಂತಿವೆ:
- **ವಲಯ/ಚಟುವಟಿಕೆ ಆಧರಿತ ಯೋಜನೆಗಳು**

ಫಲಾನುಭವಿಗಳ ವ್ಯಾಪ್ತಿಯನ್ನು ಹೆಚ್ಚಿಸಲು ಮತ್ತು ನಿರ್ದಿಷ್ಟ ವಾಣಿಜ್ಯ ಚಟುವಟಿಕೆಗಳ ಅಗತ್ಯಗಳನ್ನು ಪೂರೈಸಲು, ವಲಯ/ಚಟುವಟಿಕೆ ಆಧರಿತ ಸ್ಕೀಂಗಳನ್ನು ತರಲಾಗುತ್ತದೆ. ಪ್ರಾರಂಭಕ್ಕೆ ಕೆಲ ಉದ್ಯ,ಮಗಳಿಗೆ ಹೆಚ್ಚು ಗಮನ ನೀಡಿದ ಚಟುವಟಿಕೆಗಳು, ಸ್ಕೀಂಗಳ ಪ್ರಸ್ತಾವನೆ ಹೀಗಿದೆ:

- ಭೂ ಸಾರಿಗೆ ವಲಯ/ ಚಟುವಟಿಕೆ: ಆಟೊ ರಿಕ್ಷಾ, ಸಣ್ಣ ಉತ್ಪನ್ನಗಳ ಸಾಗಣೆ ವಾಹನ, 3 ಚಕ್ರ ವಾಹನಗಳು, ಇ-ರಿಕ್ಷಾ, ಪ್ಯಾಸೆಂಜರ್ ಕಾರುಗಳು, ಟ್ಯಾಕ್ಸಿಗಳು ಇತ್ಯಾದಿ ಒಳಗೊಂಡ ಉತ್ಪನ್ನ ಅಥವಾ ವ್ಯಕ್ತಿ ಸಾರಿಗೆಯ ವಾಹನಗಳನ್ನು ಕೊಳ್ಳಲು ಘಟಕಗಳಿಗೆ ನೆರವು.
- ಸಮುದಾಯ, ಸಾಮಾಜಿಕ ಮತ್ತು ವೈಯಕ್ತಿಕ ಸೇವಾ ಚಟುವಟಿಕೆಗಳಾದ ಸಲೂನ್‌ಗಳು, ಬ್ಯೂಟಿ ಪಾರ್ಲರ್‌ಗಳು, ಜಿಮ್ನಾಷಿಯಂ, ಬೊಟಿಕ್‌ಗಳು, ಟೈಲರಿಂಗ್ ಶಾಪ್‌ಗಳು, ಡ್ರೈ ಕ್ಲೀನಿಂಗ್, ಸೈಕಲ್ ಮತ್ತು ಮೋಟಾರ್ ಸೈಕಲ್ ರಿಪೇರಿ ಮಳಿಗೆ, ಡಿಟಿಪಿ ಮತ್ತು ಫೋಟೋ ಕಾಪಿ ಸೌಲಭ್ಯಗಳು, ಔಷಧ ಅಂಗಡಿಗಳು, ಕೊರಿಯರ್ ಏಜೆಂಟರು ಇತ್ಯಾದಿ.
- ಆಹಾರ ಉತ್ಪನ್ನಗಳ ವಲಯ: ಹಪ್ಪಳ ತಯಾರಿಕೆ, ಉಪ್ಪಿನಕಾಯಿ, ಜಾಮ್/ಜೆಲ್ಲಿ ತಯಾರಿಕೆ, ಗ್ರಾಮೀಣ ಮಟ್ಟದಲ್ಲಿ ಕೃಷಿ ಉತ್ಪನ್ನ ಸಂರಕ್ಷಣೆ, ಸಿಹಿ ತಿನಿಸು ಅಂಗಡಿ, ಸಣ್ಣ ಭೋಜನಶಾಲೆಗಳು, ಕ್ಯಾಟರಿಂಗ್/ಕ್ಯಾಂಟೀನ್ ಸೇವೆಗಳು, ಕೋಲ್ಡ್ ಚೈನ್ ವಾಹನಗಳು, ಕೋಲ್ಡ್ ಸ್ಟೋರೇಜ್, ಐಸ್ ಮೇಕಿಂಗ್ ಘಟಕಗಳು, ಐಸ್ ಕ್ರೀಂ ಉತ್ಪಾದನಾ ಘಟಕ, ಬಿಸ್ಕತ್, ಬ್ರೆಡ್ ಮತ್ತು ಬನ್ ತಯಾರಿಕೆ ಘಟಕ ಇತ್ಯಾದಿ.
- ವಸ್ತ್ರ ಉತ್ಪನ್ನಗಳ ವಲಯ/ಚಟುವಟಿಕೆ: ಕೈಮಗ್ಗ, ವಿದ್ಯುತ್ ಮಗ್ಗ, ಚಿಕಾನ್ ವರ್ಕ್, ಜರಿ

ಮತ್ತು ಝರ್ದೋಝಿ ವರ್ಕ್, ಸಾಂಪ್ರದಾಯಿಕ ಎಂಬ್ರಾಯಿಡರಿ ಮತ್ತು ಹ್ಯಾಂಡ್ ವರ್ಕ್, ಸಾಂಪ್ರದಾಯಿಕ ಡೈಯಿಂಗ್ ಮತ್ತು ಪ್ರಿಂಟಿಂಗ್, ಅಪೇರೆಲ್ ಡಿಸೈನ್, ನಿಟ್ಟಿಂಗ್, ಕಾಟನ್ ಜಿನ್ನಿಂಗ್, ಕಂಪ್ಯೂಟರೀಕೃತ ಎಂಬ್ರಾಯಿಡರಿ, ಹೊಲಿಗೆ ಮತ್ತು ಇತರೆ ಉಡುಪುಗಳಲ್ಲದ ಬ್ಯಾಗ್‌ಗಳು, ವಾಹನ ಅಕ್ಸೆಸರಿಗಳು, ಫರ್ನಿಷಿಂಗ್ ಅಕ್ಸೆಸರಿಗಳು ಇತ್ಯಾದಿ ತಯಾರಿಕೆಗಳನ್ನು ಕೈಗೊಳ್ಳಲು ನೆರವು ನೀಡುವುದು.

- ಮುಂದೆ ಈ ಯೋಜನೆಗಳಲ್ಲಿ ಇತರೆ ವಲಯಗಳು/ ಚಟುವಟಿಕೆಗಳನ್ನೂ ಸೇರಿಸಲಾಗುತ್ತದೆ.

- **ಕಿರು ಸಾಲ ಯೋಜನೆ**

  ವ್ಯಕ್ತಿಗಳು/ವ್ಯಕ್ತಿಗಳ ಗುಂಪುಗಳು/ಜೆಎಲ್‌ಜಿಗಳು/ಎಸ್‌ಎಚ್‌ಜಿಗಳಿಗೆ ಸಾಲ ನೀಡುತ್ತಿರುವ ಎಂಎಫ್‌ಐಗಳಿಗೆ ಅದಕ್ಕೆ ಸಂಪತ್ತು ಸೃಷ್ಟಿಸಲು ಆರ್‌ಬಿಐ ಮಾರ್ಗದರ್ಶನದಂತೆ ಎಂಎಸ್‌ಎಂಇಡಿ ಕಾಯ್ದೆಯ ಅನ್ವಯ ಮೈಕ್ರೋ ಎಂಟರ್‌ಪ್ರೈಸಸ್‌ಗಳನ್ನು ಸ್ಥಾಪಿಸಲು/ನಿರ್ವಹಿಸಲು ಮತ್ತು ಕೃಷಿಯೇತರ ಆದಾಯ ಸೃಷ್ಟಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಹಣಕಾಸು ನೆರವನ್ನು ಒದಗಿಸುವುದು.

- **ಕಿರು ಉದ್ಯಮ ಸಾಲಗಳು**

  ಎಂಎಸ್‌ಎಂಇಡಿ ಕಾಯ್ದೆಯ ಅನ್ವಯ ಕಿರು ಉದ್ಯಮಗಳನ್ನು ಪ್ರಾರಂಭಿಸಲು/ನಿರ್ವಹಿಸಲು ಮತ್ತು ಕೃಷಿಯೇತರ ಆದಾಯ ಸೃಷ್ಟಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವವರಿಗೆ ಪ್ರತಿ ಉದ್ಯಮ/ಸಾಲಗಾರರಿಗೆ 50,000ರೂ.ನಿಂದ 10 ಲಕ್ಷ ರೂ.ವರೆಗೆ ಸಾಲ ನೀಡುವ ಹಣಕಾಸು ಮಧ್ಯವರ್ತಿಗಳಿಗೆ ಹಣಕಾಸು ನೆರವು ನೀಡುವುದು.

- **ವಾಣಿಜ್ಯ ಬ್ಯಾಂಕ್‌ಗಳು/ಆರ್‌ಆರ್‌ಬಿಗಳು/ ಶೆಡ್ಯೂಲ್ಡ್ ಕೋ-ಆಪರೇಟಿವ್ ಬ್ಯಾಂಕ್‌ಗಳಿಗೆ ರೀಫೈನಾನ್ಸ್ ಸ್ಕೀಂ**

  ವಾಣಿಜ್ಯ ಬ್ಯಾಂಕ್‌ಗಳು/ಆರ್‌ಆರ್‌ಬಿಗಳು/ಶೆಡ್ಯೂಲ್ಡ್ ಕೋ-ಆಪರೇಟಿವ್ ಬ್ಯಾಂಕ್‌ಗಳಿಗೆ ಅವು ಎಂಎಸ್‌ಎಂಇಡಿ ಕಾಯ್ದೆಯ ಅನ್ವಯ ಉತ್ಪಾದನೆ ಮತ್ತು ಸೇವಾ ವಲಯದ ಉದ್ಯಮಗಳಿಗೆ ನೀಡಿದ ಕಿರುಸಾಲ/ ಕಿರು ಉದ್ಯಮ ಸಾಲಗಳ ರೀಫೈನಾನ್ಸ್ ಮಾಡುವ ಮೂಲಕ ಅವುಗಳ ನಗದನ್ನು ಹೆಚ್ಚಿಸುವುದು.

- **ಮಹಿಳಾ ಉದ್ಯಮಿ ಯೋಜನೆ**

  ಆರ್‌ಬಿಐ ಮಾರ್ಗದರ್ಶನದಂತೆ ಎಂಎಸ್‌ಎಂಇಡಿ ಕಾಯ್ದೆಯ ಅನ್ವಯ ಕಿರು ಉದ್ಯಮಗಳನ್ನು ನಡೆಸಲು ಮತ್ತು ಕೃಷಿಯೇತರ ಆದಾಯ ಸೃಷ್ಟಿಯ ಚಟುವಟಿಕೆಗಳನ್ನು ನಿರ್ವಹಿಸಲು ಮಹಿಳೆಯರು/ಸ್ತ್ರೀಯರ ಗುಂಪು/ಜೆಎಲ್‌ಜಿಗಳು/ಎಸ್‌ಎಚ್‌ಜಿಗಳಿಗೆ ನೆರವಾಗುವ ಎಂಎಫ್‌ಐಗಳಿಗೆ ಸಕಾಲಿಕ ಮತ್ತು ಸೂಕ್ತ ಹಣಕಾಸು ನೆರವು ನೀಡುವುದು.

## ಮುದ್ರಾ ಕಾರ್ಡ್

ಸಾಲ ಸುಲಭವಾಗಿ ದೊರೆಯುವಂತೆ ಮಾಡಲು ಉತ್ಪಾದಿಸಿರುವ ವಿನೂತನ ಉತ್ಪನ್ನ ಮುದ್ರಾ ಕಾರ್ಡ್. ಮುದ್ರಾ ಕಾರ್ಡ್‌ಗೆ ಓವರ್‌ಡ್ರಾಫ್ಟ್ ಮಿತಿ ಇದ್ದು ರುಪೇ ಆಧರಿತ ಡೆಬಿಟ್ ಕಾರ್ಡ್ ಆಗಿ ನಿರ್ವಹಿಸಲಾಗುತ್ತದೆ. ಈ ಕಾರ್ಡ್ ಅನ್ನು ನೇರವಾಗಿ ಬ್ಯಾಂಕ್‌ಗಳು ಅಥವಾ ಎಂಎಫ್‌ಐಗಳ ಸಹಯೋಗದಲ್ಲಿ ವಿತರಿಸಬಹುದು. ಮುದ್ರಾ ಕಾರ್ಡ್ ಎನ್ನುವುದು ಮುದ್ರಾ, ಬ್ಯಾಂಕ್‌ಗಳು, ಎಂಎಫ್‌ಐಗಳ ಕೋ-ಬ್ರಾಂಡೆಡ್ ಕಾರ್ಡ್ ಆಗಿದ್ದು ಸಾಲದ ಭರವಸೆ ಮತ್ತು ಸಾಲದ ಹೆಚ್ಚಳದ ಬೆಂಬಲ ದೊರೆಯುತ್ತದೆ.




## ಪ್ರಧಾನ ಮಂತ್ರಿ ಮುದ್ರಾ ಯೋಜನಾ (PMMY)

- ಏಪ್ರಿಲ್ 08, 2015ರಂದು ಮುದ್ರಾ ಲಿಮಿಟೆಡ್ ಪ್ರಾರಂಭಿಸುವಾಗ ಗೌರವಾನ್ವಿತ ಪ್ರಧಾನ ಮಂತ್ರಿಗಳು ಪಿಎಂಎಂವೈ ಅನ್ನೂ ಪ್ರಾರಂಭಿಸಿದರು. ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಹಣಕಾಸು ಸೇವೆಗಳ ಇಲಾಖೆ ಮಾರ್ಚ್ 14, 2015ರಂದು ಕಳುಹಿಸಿದ ಪತ್ರದಲ್ಲಿ ಎಲ್ಲ ಸಾರ್ವಜನಿಕ ವಲಯದ ಬ್ಯಾಂಕ್‌ಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು/ ರಾಜ್ಯ ಸಹಕಾರ ಬ್ಯಾಂಕ್‌ಗಳು/ಅರ್ಬನ್ ಕೋಆಪರೇಟಿವ್ ಬ್ಯಾಂಕ್‌ಗಳಿಗೆ ಕೃಷಿಯೇತರ ಆದಾಯ ಸೃಷ್ಟಿಯ ಚಟುವಟಿಕೆಗಳಿಗೆ ನೀಡಲಾದ 10 ಲಕ್ಷ ಒಳಗಿನ ಸಾಲಗಳನ್ನು ಪಿಎಂಎಂವೈ ಅನ್ವಯ ಮುದ್ರಾ ಸಾಲಗಳು ಎಂದು ವರ್ಗೀಕರಿಸಲು ಸೂಚಿಸಿದೆ. ಪಿಎಂಎಂವೈ ಸಾಲಗಳು ಪ್ರಧಾನ ಮಂತ್ರಿ ಜನ್ ಧನ್ ಯೋಜನೆ(ಪಿಎಂಜೆಡಿವೈ)ಯಲ್ಲಿ 5000 ಓವರ್‌ಡ್ರಾಫ್ಟ್ ಸೌಲಭ್ಯ ಒಳಗೊಂಡಿವೆ. ಮುದ್ರಾ ಪಿಎಂಎಂವೈಗೆ ಕೂಡಾ ರೀಫೈನಾನ್ಸ್/ಕ್ರೆಡಿಟ್ ಗ್ಯಾರೆಂಟೀ ಬೆಂಬಲ ನೀಡುತ್ತದೆ.

- **ಪಿಎಂಎಂವೈ ಪಡೆಯುವುದು ಹೇಗೆ?**

  - ಪಿಎಂಎಂವೈ ಅನ್ವಯ ಸಾಲ ಪಡೆಯಲು ಬಯಸುವವರು ಆತ/ಆಕೆಗೆ ಹತ್ತಿರದಲ್ಲಿರುವ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ವಲಯದ ವಾಣಿಜ್ಯ ಬ್ಯಾಂಕ್ ಶಾಖೆಗೆ ಹೋಗಿ ಸೂಕ್ತ ಬ್ಯುಸಿನೆಸ್ ಪ್ಲಾನ್ ಮತ್ತು ಸಾಲದ ಅರ್ಜಿ ಸಲ್ಲಿಸಿ ಪಡೆಯಬಹುದು.
  - ಸಾಲದ ಅರ್ಜಿಯ ಸಂಸ್ಕರಣೆಯಾದ ನಂತರ ಸಾಲ ನೀಡುವ ಸಂಸ್ಥೆ ಸಾಲ ನೀಡುತ್ತದೆ.
  - ಸಾಲ ಪಡೆಯುವವರು ಸಾಲ ನೀಡುವ ಸಂಸ್ಥೆಯ ಅಗತ್ಯಗಳಿಗೆ ತಕ್ಕಂತೆ ಸಾಲದ ದಾಖಲೆಗಳು ಮತ್ತು ವಿಧಿ ವಿಧಾನಗಳನ್ನು ಪೂರೈಸಬೇಕು.
  - ಸಣ್ಣ ವ್ಯಾಪಾರ ಚಟುವಟಿಕೆಗಳು/ಕಿರು ಉದ್ಯಮಗಳನ್ನು ಕೈಗೊಳ್ಳಲು ಸಾಲವನ್ನು ಬಿಡುಗಡೆ ಮಾಡಲಾಗುತ್ತದೆ

## ಮುದ್ರಾ ಹೆಲ್ಪ್‌ಲೈನ್

- ಮುದ್ರಾ ಉತ್ಪನ್ನಗಳ ಕುರಿತು ಮಾಹಿತಿಗೆ ಮತ್ತು ಯಾವುದೇ ಬಗೆಯ ನೆರವಿಗೆ ಸಾಲ ಪಡೆಯುವವರು ಮುಂಬೈನ ಮುದ್ರಾ ಕಛೇರಿಯನ್ನು ಕೇಳಬಹುದು/ಸಂಪರ್ಕಿಸಬಹುದು ಅಥವಾ ಗುರುತಿಸಲಾದ ಮುದ್ರಾ ನೋಡಲ್ ಆಫೀಸರ್‌ಗಳನ್ನು ಸಂಪರ್ಕಿಸಬಹುದು. ಅವರ ವಿವರಗಳು(ಸಂಪರ್ಕ ಸಂಖ್ಯೆ ಮತ್ತು ಮೇಲ್ ಐಡಿಗಳು) ಮುದ್ರಾ ವೆಬ್‌ಸೈಟ್‌ನಲ್ಲಿ ದೊರೆಯುತ್ತದೆ. ಸಾಲ ಪಡೆಯುವವರು www.mudra.org.in ಮುದ್ರಾ ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಮತ್ತು ಯಾವುದೇ ಬಗೆಯ ವಿಚಾರಣೆ/ಸಲಹೆಯನ್ನು help@mudra.org.in ಇಲ್ಲಿಗೆ ಕಳುಹಿಸಬಹುದು.

- ಮುದ್ರಾ ವಿವಿಧ ಸಿಡ್ಬಿ ಪ್ರಾದೇಶಿಕ ಕಛೇರಿಗಳು/ ಶಾಖೆಗಳಲ್ಲಿ ನೋಡಲ್ ಆಫೀಸರ್‌ಗಳನ್ನು ಗುರುತಿಸಿದ್ದು ಮುದ್ರಾಗೆ 'ಪ್ರಥಮ ಸಂಪರ್ಕ ವ್ಯಕ್ತಿ'ಗಳಾಗಿರುತ್ತಾರೆ.